# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :1532 (1880) |
| 2. | ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | :ಶ್ರೀಮತಿ ಬಲ್ಕೀಸ್ ಬಾನು<br>(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| 3. | ಉತ್ತರಿಸಬೇಕಾದ ದಿನಾಂಕ | :23.03.2026 |
| 4. | ಉತ್ತರಿಸುವ ಸಚಿವರು | :ಮಾನ್ಯ ಆಹಾರ ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಗ್ರಾಹಕರಿಗೆ ತೂಕ ಮತ್ತು ಅಳತೆಯಲ್ಲಿ ವಂಚಿಸುವ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;</td><td>ಬಂದಿದೆ</td></tr>
<tr><td>ಆ)</td><td>ಕಳೆದ 3 ವರ್ಷದಿಂದ ಇಲ್ಲಿಯವರೆಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಯಲ್ಲಿ ಎಷ್ಟು ಸ್ಥಳಗಳಲ್ಲಿ ದಾಳಿ ನಡೆಸಿ, ತಪಾಸಣೆ ಮಾಡಿ ಎಷ್ಟು ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ ಹಾಗೂ ಎಷ್ಟು ದಂಡವನ್ನು ವಸೂಲಿ ಮಾಡಲಾಗಿದೆ.</td><td>ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಹಾಯಕ ನಿಯಂತ್ರಕರುಗಳು ಹಾಗೂ ಉಪ ವಿಭಾಗ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಿರೀಕ್ಷಕರುಗಳು ಆಗಿಂದ್ದಾಗ್ಗೆ [illegible] ಕೈಗೊಂಡು ತಪ್ಪಿತಸ್ಥರ ವಿರುದ್ಧ ದಿ ಲೀಗಲ್ ಮೆಟ್ರಾಲಜಿ ಕಾಯ್ದೆ 2009 ರ ಸೆಕ್ಷನ್ 15 ರಡಿಯಲ್ಲಿ ತಪಾಸಣೆಯನ್ನು ಕೈಗೊಂಡು, ಉಲ್ಲಂಘನೆ ಕಂಡು ಬಂದಲ್ಲಿ ಕಾನೂನು/ ನಿಯಮಾನುಸಾರ ಮೊಕದ್ದಮೆಯನ್ನು ಹೂಡಿ, ಸದರಿಯವರಿಂದ ಅಭಿಸಂಧಾನ ಶುಲ್ಕವನ್ನು ವಸೂಲು ಮಾಡಲಾಗುತ್ತಿದೆ.<br><br>ಈ ರೀತಿಯಾಗಿ ಕಳೆದ 3 ವರ್ಷಗಳಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯಲ್ಲಿ ನಡೆಸಲಾಗಿರುವ ತಪಾಸಣೆ, ಮೊಕದ್ದಮೆ ಮತ್ತು ಸಂಗ್ರಹಿಸಲಾದ ದಂಡದ ವಿವರಗಳು ಈ ಕೆಳಗಿನಂತಿವೆ<br><br>
<table>
<tr><th>ವರ್ಷ</th><th>ನಡೆಸಲಾದ ತಪಾಸಣೆಗಳ ಸಂಖ್ಯೆ</th><th>ಹೂಡಲಾದ ಮೊಕದ್ದಮೆಗಳ ಸಂಖ್ಯೆ</th><th>ಸಂಗ್ರಹಿಸಲಾದ ಅಭಿಸಂಧಾನ ಶುಲ್ಕ</th></tr>
<tr><td>2022-23</td><td>80,709</td><td>25,303</td><td>6,79,62,700/-</td></tr>
<tr><td>2023-24</td><td>73,876</td><td>16,806</td><td>6,06,21,750/-</td></tr>
<tr><td>2024-25</td><td>69,606</td><td>14,989</td><td>4,44,34,100/-</td></tr>
</table></td></tr>
<tr><td>ಇ)</td><td>ಕಳೆದ 3 ವರ್ಷದಿಂದ ತೂಕ ಮತ್ತು ಅಳತೆಯಲ್ಲಿ ಮೋಸವಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ಬಂದಿರುವ ದೂರುಗಳ ಸಂಖ್ಯೆ ಎಷ್ಟು; ಗ್ರಾಹಕರಿಗೆ ಮೋಸ ಮಾಡುವ ವ್ಯಾಪಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರ ಅನುಸರಿಸುವ ಮಾನದಂಡವೇನು?</td><td>ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಹಾಯಕ ನಿಯಂತ್ರಕರುಗಳು ಹಾಗೂ ಉಪ ವಿಭಾಗ/ತಾಲ್ಲೂಕು ಮಟ್ಟದಲ್ಲಿ ನಿರೀಕ್ಷಕರುಗಳು ಆಗಿಂದಾಗ್ಗೆ ತಪಾಸಣೆ ಕೈಗೊಂಡು ತಪ್ಪಿತಸ್ಥರ ವಿರುದ್ಧ ದಿ ಲೀಗಲ್ ಮೆಟ್ರಾಲಜಿ ಕಾಯ್ದೆ 2009 ರ ಸೆಕ್ಷನ್ 15 ರಡಿಯಲ್ಲಿ ತಪಾಸಣೆಯನ್ನು ಕೈಗೊಳ್ಳುತ್ತಾರೆ. ಒಂದು ವೇಳೆ ತೂಕ ಮತ್ತು ಅಳತೆ ಸಾಧನಗಳಲ್ಲಿ ದೋಷಗಳು ಕಂಡು ಬಂದಲ್ಲಿ ಕಾನೂನು/ ನಿಯಮಾನುಸಾರ ಮೊಕದ್ದಮೆಯನ್ನು ಹೂಡಿ, ಸದರಿ ಯವರಿಂದ ಅಭಿಸಂಧಾನ ಶುಲ್ಕವನ್ನು ವಸೂಲು ಮಾಡಲಾಗುವುದು. ಅಭಿಸಂಧಾನ ದಂಡವನ್ನು ಭರಿಸಲು ನಿರಾಕರಿಸುವವರ ವಿರುದ್ಧ ಸಂಬಂಧಿಸಿದ ಕ್ಷೇತ್ರವ್ಯಾಪ್ತಿಯ ಜೆ.ಎಂ.ಎಫ್.ಸಿ/ ಎಂ.ಎಂ.ಟಿ.ಸಿ/ ಜಿಲ್ಲಾ ಸೆಷನ್ಸ್ ನ್ಯಾಯಾಲಯದಲ್ಲಿ ದಾವೆ ಹೂಡಿ, ಮಾನ್ಯ ನ್ಯಾಯಾಲಯದ ಆದೇಶದಂತೆ ಕ್ರಮ ಕೈಗೊಳ್ಳಲಾಗುತ್ತಿದೆ</td></tr>
</table>

<table>
<tr>
<td></td>
<td></td>
<td>ತೂಕ ಮತ್ತು ಅಳತೆಯಲ್ಲಿ ಮೋಸವಾಗುತ್ತಿರುವ ಬಗ್ಗೆ ಕಳೆದ 3 ವರ್ಷದಿಂದ ಸಾರ್ವಜನಿಕರಿಂದ ಬಂದಿರುವ ದೂರುಗಳ ಸಂಖ್ಯೆಯು ವಿವರವು ಈ ಕೆಳಗಿನಂತಿದೆ.<br><br>
<table>
<tr><th>ವರ್ಷ</th><th>ಸ್ವೀಕರಿಸಲಾದ ದೂರುಗಳ ಸಂಖ್ಯೆ</th></tr>
<tr><td>2022-23</td><td>56</td></tr>
<tr><td>2023-24</td><td>49</td></tr>
<tr><td>2024-25</td><td>68</td></tr>
</table>
</td>
</tr>
<tr>
<td>ಈ)</td>
<td>ಗ್ರಾಹಕರ ತೂಕ ಮತ್ತು ಅಳತೆಯಲ್ಲಿ ಇಲಾಖೆಯ ನಿಯಮದಡಿಯಲ್ಲಿ ಯಾವ ಯಾವ ಪ್ರಕರಣಗಳನ್ನು ಹಿಡಿಯಲು ಸರ್ಕಾರದಿಂದ ಅನುಮತಿ ನೀಡಲಾಗಿದೆ?</td>
<td>ಕಾನೂನು ಮಾಪನಶಾಸ್ತ್ರ ಇಲಾಖೆಯಲ್ಲಿ ತೂಕ ಮತ್ತು ಅಳತೆಗಳಿಗೆ ಹಾಗೂ ಪೊಟ್ಟಣ ಸಾಮಗ್ರಿಗಳಿಗೆ ಸಂಬಂಧಿಸಿದಂತೆ,<br><br>
1. ನಿಗದಿತ ಅವಧಿಯಲ್ಲಿ ತೂಕ ಮತ್ತು ಅಳತೆ ಸಾಧನಗಳನ್ನು ಸತ್ಯಾಪನೆ ಮತ್ತು ಮುದ್ರೆ ಮಾಡದೇ ಇರುವುದು.<br>
2. ಕಡಿಮೆ ತೂಕ ಮತ್ತು ಅಳತೆ ವಿತರಣೆ ಮಾಡುವುದು.<br>
3. ತೂಕ ಮತ್ತು ಅಳತೆ ಸಾಧನಗಳನ್ನು Alteration / Tamper ಮಾಡುವುದು.<br>
4. ಸತ್ಯಾಪನಾ ಪ್ರಮಾಣಪತ್ರವನ್ನು ಅಂಗಡಿಗಳಲ್ಲಿ ಪ್ರದರ್ಶಿಸದೇ ಇರುವುದು.<br>
5. ಪೊಟ್ಟಣ ರೂಪದಲ್ಲಿ ಸಿಗುವ ಎಲ್ಲಾ ಪದಾರ್ಥಗಳ ಮೇಲೆ ನಿಗದಿತ ಘೋಷಣೆಗಳನ್ನು ನಮೂದಿಸದೇ ಇರುವುದು.<br>
6. ನಿಗದಿತ ಎಂ.ಆರ್.ಪಿ ದರಕ್ಕಿಂತ ಹೆಚ್ಚಿನ ದರಕ್ಕೆ ಮಾರಾಟ ಮಾಡುವುದು.<br>
7. ಪೊಟ್ಟಣ ರೂಪದಲ್ಲಿ ಸಿಗುವ ಎಲ್ಲಾ ಪದಾರ್ಥಗಳು ನಿವ್ವಳ ಪ್ರಮಾಣಕ್ಕಿಂತ ಕಡಿಮೆ ಇರುವುದು.</td>
</tr>
</table>

**ಸಂ: ಆನಾಪ 35 ಕಾಮಾಪೇ 2026**

**(ಕೆ.ಹೆಚ್. ಮುನಿಯಪ್ಪ)**
**ಆಹಾರ, ನಾಗರಿಕ ಸರಬರಾಜು ಮತ್ತು**
**ಗ್ರಾಹಕರ ವ್ಯವಹಾರಗಳು ಹಾಗೂ**
**ಕಾನೂನು ಮಾಪನಶಾಸ್ತ್ರ ಸಚಿವರು**